**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**
**ರಾಷ್ಟ್ರೀಯಾ ಸೇವಾ ಯೋಜನೆ**

ಸಂ:ಡಿಟಿಇ/ಎನ್‌ಎಸ್‌ಎಸ್/13/ಕಾ-ಕಾರ್ಯಗಾರ/2017-18

ಸಂಯೋಜನಾಧಿಕಾರಿ ಕಛೇರಿ
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ: 10-10-2018

**ಸುತ್ತೋಲೆ**

**ವಿಷಯ:** ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳ ರಾಜ್ಯ ಮಟ್ಟದ ಒಂದು ದಿನದ ಕಾರ್ಯಗಾರದ ಬಗ್ಗೆ.
**ಉಲ್ಲೇಖ:** 1) ಎನ್‌ಎಸ್‌ಎಸ್ ಮ್ಯಾನುಯಲ್‌ನ ನಿಯಮ 2.20 ಮತ್ತು ನಿಯಮ 3.35
2) ಕಛೇರಿಯ ಸಲಹಾ ಸಮಿತಿ ನಡಾವಳಿ ದಿನಾಂಕ: **15-05-2018**

* * * * *

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ರಾಜ್ಯದ ಎಲ್ಲ ಪಾಲಿಟೆಕ್ನಿಕ್‌ಗಳ ಎನ್‌ಎಸ್‌ಎಸ್ ಅನುದಾನಿತ ಘಟಕ ಮತ್ತು ಸ್ವ-ಆರ್ಥಿಕ ಘಟಕಗಳ ಕಾರ್ಯಕ್ರಮಾಧಿಕಾರಿಗಳಿಗೆ 2018-19ನೇ ಸಾಲಿನ ಒಂದು ದಿವಸದ ಕಾರ್ಯಾಗಾರವನ್ನು ದಿನಾಂಕ: 23-10-2018 ರಂದು ಬೆಂಗಳೂರಿನ **ಕುಮಾರ ಪಾರ್ಕ ಪೂರ್ವ ಶೇಷಾದ್ರಿಪುರದಲ್ಲಿರುವ ಗಾಂಧಿಭವನದಲ್ಲಿ** ಏರ್ಪಡಿಸಲಾಗಿದೆ. ಈ ಕಾರ್ಯಗಾರಕ್ಕೆ ಎಲ್ಲಾ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳು ತಪ್ಪದೇ ಹಾಜರಾಗಲು ಸೂಚಿಸಲಾಗಿದೆ.

| ಕ್ರ.ಸಂ | ಕಾರ್ಯಗಾರದ ಸ್ಥಳ | ದಿನಾಂಕ | ಸಮಯ |
|---|---|---|---|
| 01 | **ಗಾಂಧಿಭವನ ಕುಮಾರ ಪಾರ್ಕ ಪೂರ್ವ ಶೇಷಾದ್ರಿಪುರ ಬೆಂಗಳೂರು -560001** | 23-10-2018 | **ಬೆಳಗ್ಗೆ 9.00 ಘಂಟೆ ಯಿಂದ 5.00 ಘಂಟೆ ರವರೆಗೆ.** |

**ವಿಶೇಷ ಸೂಚನೆ** : ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳು ಬೆಳಗ್ಗೆ 9.00 ಕ್ಕೆ ಹಾಜರಿದ್ದು ನೊಂದಣಿ ಪ್ರಕ್ರೀಯೆಯನ್ನು ಪೂರ್ಣಗೊಳಿಸಿ, ಎನ್‌ಎಸ್‌ಎಸ್‌ನ ಪೂರಕ ಸಾಧನ ಸಾಮಗ್ರಿಗಳನ್ನು ಪಡೆಯುವುದು. ಕಾರ್ಯಗಾರಕ್ಕೆ ಬರುವಾಗ 2018-19 ನೇ ಸಾಲಿನ ಸ್ವಯಂ ಸೇವಕರ ನೊಂದಾವಣೆ ಪಟ್ಟಿ, ಗ್ರಾಂಟ್ ಇನ್ ಏಡ್ ಬಿಲ್ ತರುವುದು. PFMS ತರಬೇತಿ ನಡೆಯುವುದರಿಂದ ಒಂದು ಪಾಲಿಟೆಕ್ನಿಕ್‌ಗೆ ಕನಿಷ್ಠ ಒಂದರಂತೆ ಲ್ಯಾಪ್‌ಟಾಪ್ ತರುವುದು.

ಸದರಿ ಕಾರ್ಯಗಾರದಲ್ಲಿ 2016-17 ನೇ ಸಾಲಿನ ಇಲಾಖೆ ಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದ ಸ್ವಯಂ ಸೇವಕರನ್ನು ಆಯಾ ಪಾಲಿಟೆಕ್ನಿಕ್ ಕಾರ್ಯಕ್ರಮಾಧಿಕಾರಿಗಳು ಕರೆತರುವುದು. ಕಾರ್ಯಗಾರವು **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, **ಪ್ರಾದೇಶಿಕ ನಿರ್ದೇಶಕರು** (ಭಾರತ ಸರ್ಕಾರ) ಮತ್ತು **ರಾಜ್ಯ ಸಂಪರ್ಕಾಧಿಕಾರಿಗಳು,** ಇವರ ಸಮ್ಮುಖದಲ್ಲಿ ನಡೆಯಲಿರುವದರಿಂದ, ಕಾರ್ಯಗಾರದಲ್ಲಿ ಭಾಗವಹಿಸುವ ಕಾರ್ಯಕ್ರಮಾಧಿಕಾರಿಗಳು ಸಮಯಕ್ಕೆ ಸರಿಯಾಗಿ ಹಾಜರಾಗಿ, ಶಿಸ್ತು ಬದ್ಧತೆಯನ್ನು ಪಾಲಿಸಲು ತಿಳಿಸಲಾಗಿದೆ. ಇದೇ ಕಾರ್ಯಗಾರದಲ್ಲಿ ಕಳೆದ ವರ್ಷ ಎನ್.ಎಸ್.ಎಸ್ ನಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳ ಪವರ್ ಪಾಯಿಂಟ್ ಪ್ರಜೆಂಟೇಷನ್ ನನ್ನು ಕೆಳಗೆ ಸೂಚಿಸಿರುವ ಲಿಂಕ್ ನಲ್ಲಿ ತಿಳಿಸಿರುವಂತೆ ತಯಾರಿಸಿ (https://docs.google.com/presentation/d/1NoiF-YbV8_QI_o0L0XlaKFvk9g7oPbjolDsq87F7tyM/edit?usp=sharing) ಕಾರ್ಯಗಾರದಲ್ಲಿ ಹಾಜರಾಗುವಂತೆ ಪ್ರಾಚಾರ್ಯರು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ನಿರ್ದೇಶಕರು

**ಇವರಿಗೆ,** ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ -ಸೂಕ್ತ ಕ್ರಮಕ್ಕಾಗಿ

ಪ್ರತಿ:

1. ರಾಜ್ಯ ಸಂಪರ್ಕಾಧಿಕಾರಿಗಳು ರಾಜ್ಯ ಎನ್‌ಎಸ್‌ಎಸ್ ಕೋಶ ಯುವಜನ ಸೇವಾ ಇಲಾಖೆ ಬೆಂಗಳೂರು.
2. ಪ್ರಾದೇಶಿಕ ನಿರ್ದೇಶಕರು, ಎನ್‌ಎಸ್‌ಎಸ್ ಪ್ರಾದೇಶಿಕ ಕೇಂದ್ರ, ಬಸವನಗುಡಿ ಬೆಂಗಳೂರು-04
3. ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ